ತಾಲ್ಲೂಕು.	ಹೋಬಳಿ.	ಗ್ರಾಮ.		ಮಾಡಬೇಕಾದ ಬದಲಾವಣೆ.
		ಗೆಜೆಟ್ಟಿನಲ್ಲಿ ಜಂಜರ್ ನಂಬರ್	ಹೆಸರು.	
7. ತಿಪ್ಪಟ್ಟು ...	ಜಂಗಂಕೋಟೆ ...	36	ದೊಡ್ಡಹಾರಡಿ ...	"ಜಂಗಂಕೋಟೆ ಪ್ಲಾಂಟೇರ್ಷ್" ಎಂದು ತಿದ್ದತಕ್ಕದ್ದು.
8. ಮಾಲೂರು.	ಗೆಜಿಹಳ್ಳಿ ಪಟ್ಟಣ		ರಾಮಚಂದ್ರಾಪುರ ಪ್ಲಾಂಟೇರ್ಷ್.	
			ಹೊಸಕುರಂಡಹಳ್ಳಿ ಪ್ಲಾಂಟೇರ್ಷ್	ಮಾಲೂರು ಹೋಬಳಿಗೆ ಸೇರಿಸತಕ್ಕದ್ದು.
			ಕುರಂಡಹಳ್ಳಿ ಪ್ಲಾಂಟೇರ್ಷ್.	
			ಜೋಡಿ ಪಟಗೇನಹಳ್ಳಿ ...	
			ದೆಣ್ಣೇರಿ ಪ್ಲಾಂಟೇರ್ಷ್	ಮಾಸ್ತಿ ಹೋಬಳಿಗೆ ಸೇರಿಸತಕ್ಕದ್ದು.
9. ಮುಳಬಾಗಲು.	ಬೈರಕೂರು	61	ಚಿಂತಲಹಳ್ಳಿ (ಜೋಡಿ)	ಮುಳಬಾಗಲ್ ಹೋಬಳಿಗೆ ವರ್ಗಮಾಡತಕ್ಕದ್ದು.
	ಮಲ್ಲನಾಯಕನಹಳ್ಳಿ.	33	ತಿಪ್ಪದೊಡ್ಡಿ ...	
		34	ಕಗ್ಗನಹಳ್ಳಿ ...	
		35	ಕುಕ್ಕಲದೊಡ್ಡಿ	
		36	ಕುರುಬರಹಳ್ಳಿ ...	ಬೈರಕೂರು ಹೋಬಳಿಗೆ ವರ್ಗಮಾಡತಕ್ಕದ್ದು.
		37	ಚಿನ್ನಬಾಲೆಪಲ್ಲಿ ...	
		38	ಜಲ್ಲಪಲ್ಲಿ ...	
		39	ಗೋಣೀಕೊಪ್ಪ ...	
		40	ಉಗಣಿ ...	

ತಾರೀಖು 8ನೆ ಆಗಸ್ಟು 1907.

ನಂ. ರೆ. 1141—ಲ್ಯಾ. ರೆ. 77-07-1, ಈ ಕೆಳಗೆ ನಮೂದಿಸುವ ಡೆಪ್ಯೂಟಿ ಕಮಿಷನರುಗಳ ಬಡತಿಗಳನ್ನು 1907ನೆ ಇಸವಿಯ ಜುಲೈ 3ನೆ ತಾರೀಖಿನಿಂದ ಮಂಜೂರ್ಮಾಡಿದೆ :—

ಮಿ॥ ಡಿ. ದೇವರಾಜ ಅರಸಿನವರು—ಡೆಪ್ಯುಟಿ ಕಮಿಷನರ 2ನೆ ತರಗತಿಯಿಂದ 1ನೆ ತರಗತಿಗೆ.

ಮಿ॥ ಎಂ. ಕಾಂತರಾಜ ಅರಸಿನವರು—ಡೆಪ್ಯುಟಿ ಕಮಿಷನರ 3ನೆ ತರಗತಿಯಿಂದ 2ನೆ ತರಗತಿಗೆ.

ತಾರೀಖು 10ನೆ ಆಗಸ್ಟು 1907.

ನಂ. ಫೈ. 673—ಸೆ. ರೆ. 50-07-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣಾನುಸಾರವಾಗಿ, ಎಕ್ಸೈಸ್ ಕಮಿಷನರವರ ಕಚೇರಿಗೆ ಲಗತ್ತು ಮಾಡಿರುವ ಅಸಿಸ್ಟೆಂಟ್ ಕಮಿಷನರ್ ಮಿ॥ ಎ. ವ್ಯತ್ಯಂಜಯ ಐಯ್ಯರಿಗೆ 1907ನೆ ಇಸವಿಯ ಆಗಸ್ಟು 15ನೆ ತಾರೀಖಿನಿಂದ ಹತ್ತು ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ಹುಕುಂ ಖವೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ನ್ಯಾಯವಿಧಾಯಕ ಸಭೆಯ ಕೌನ್ಸಿಲ್.

ತಾರೀಖು 14ನೆ ಆಗಸ್ಟು 1907.

ನಂ. ಲೆ. ಕೌ. 69, 1907ನೆ ಇಸವಿಯ ಆಗಸ್ಟು 28ನೆ ತಾರೀಖಿನ ಬುಧವಾರ ಮಧ್ಯಾಹ್ನಾತ್ಪರ 3 ಘಂಟೆಗೆ ಬೆಂಗಳೂರು ಪಬ್ಲಿಕ್ ಕಚೇರಿಗಳ ಕಟ್ಟಡದಲ್ಲಿ ಮೈಸೂರು ಸೀಮೆಯ ಲೆಜಿಸ್ಲೇಟಿವ್ ಕೌನ್ಸಿಲ್ ಯಾ ನ್ಯಾಯವಿಧಾಯಕ ಸಭೆಯು ಸೇರುವುದು.

ಅಪ್ಪಣೆಯ ಮೇರೆಗೆ,
ಕೆ. ವೈಲಾರರಾವ್,
ಮೈಸೂರು ಸೀಮೆಯ ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ಫೈನಾನ್ಷಿಯಲ್ ಡಿಪಾರ್ಟ್‌ಮೆಂಟ್.

ತಾರೀಖು 10ನೆ ಆಗಸ್ಟು 1907.

ನಂ. ಫೈ. 675-47-07, ನಿಕಲ್ ಎಂಬ ಲೋಹದ ಒಂದು ಆಣೆಯ ನಾಣ್ಯದ ಚಲಾವಣೆಗೆ ಅಧಿಕಾರ ಕೊಟ್ಟು, ಮತ್ತು ಸದರಿ ನಾಣ್ಯದ ವಿವರಣೆಯನ್ನು ನಮೂದು ಮಾಡಿ ಇಂಡಿಯಾ ಸರ್ಕಾರದ ಫೈನಾನ್ಸ್ ಇಲಾಖೆಯಿಂದ ಹುಟ್ಟಿದ 1907ನೆ ಇಸವಿಯ ಜುಲೈ 22ನೆ ತಾರೀಖಿನ 4597 A. ನೆ ನಂಬರಿನ ಇದರಡಿ ಕಂಡ ಇನ್ಸ್ಟ್ರಾರ್ಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

"ಅಕೌಂಟ್ಸ್ ಮತ್ತು ಫೈನಾನ್ಸ್ ಟಂಕಸಾಲೆ

22ನೆ ಜುಲೈ 1907.

ನಂ. 4597 A.—1906ನೆ ಇಸವಿ 3ನೆ ನಂಬರ್ ಇಂಡಿಯ್ ಕಾಯಿನೇಜ್ ಯಾ ನಾಣ್ಯಗಳ ತಯಾರಿಯ ಆಕ್ಟಿನ 10ನೆ ಪ್ರಕರಣದ (1)ನೆ ಒಳಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸನಮೇತರಾದ ಗವರ್ನರ್ ಜನರಲ್ ರವರು ಇದರಡಿ ಕಂಡ ಹುಕುಂ ದಯಪಾಲಿಸಿರುತ್ತಾರೆ :—